(*b*) Sanction is accorded for construction of 11 houses (details are furnished in Statement 'B' placed on the Table of the House).*

(*c*) The construction of houses during 1977-78 will be considered for the eligible families.

People's Housing Scheme in Bijapur District

96. SRI M. M SAJJAN (Muddebihal):—Will the Minister for Housing and Youth Services be pleased to state:—

(*a*) the total amount spent on People's Housing Scheme in Bijapur District (year-wise) during 1973-74, 1974-75, 1975-76 (Taluk wise);

(*b*) the total number of houses taken up and the amount spent for construction under People's Housing Scheme as on 31st December 1976 (Taluk wise);

(*c*) whether Government is aware that some houses constructed under this Scheme have collapsed;

(*d*) if so, the action Government has taken against the Officers responsible in the matter?

SRI R. GUNDURAO (Minister for Housing and Youth Services):—

(*a*) Statement 'A' placed on the table of the House.*

(*b*) Statement 'B' placed on the table of the House.*

(*c*) Yes.

(*d*) The houses have collapsed due to heavy rains and action is being taken to reconstruct the houses.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ತಾವು ಕೊಟ್ಟಿರತಕ್ಕ ಪಟ್ಟಿಯಲ್ಲಿ 65 ಮನೆಗಳಿಗೆ ಆರ್ಜಿ ಬಂದಿದೆ ಎಂದು ಹೇಳಿದ್ದೀರಿ. 1974-75ರಿಂದ ಈಚೆಗೆ ಎಷ್ಟು ಮನೆಗಳನ್ನು ಆ ಗ್ರಾಮಗಳಲ್ಲಿ ಕಟ್ಟಿಸಿದ್ದೀರಿ?

† ಶ್ರೀ ಆರ್ ಗುಂಡೂರಾವ್.—1974ರಲ್ಲಿ 120 ಮನೆಗಳನ್ನು ಕಟ್ಟಿ ಈಗಾಗಲೇ ವಾಸಕ್ಕೆ ಅನುಮತಿ ಕೊಟ್ಟಿದ್ದೇವೆ.

ಶ್ರೀ ಜಿ ಪುಟ್ಟಸ್ವಾಮಿ.—ಅಧ್ಯಕ್ಷರೇ, ಪ್ರತ್ಯೇಕವಾಗಿ ಸಂಬಂಧಪಟ್ಟ ಗ್ರಾಮಗಳಲ್ಲಿ ಎಷ್ಟೆಷ್ಟು ಮನೆಗಳನ್ನು ಕಟ್ಟಿದ್ದೀರಾ, ಎಷ್ಟೆಷ್ಟು ಆರ್ಜಿಗಳು ಬಂದಿದ್ದುವು ಎಂದು ಕೇಳಿದ್ದಕ್ಕೆ, ಅಂಕಿಅಂಶಗಳು ಇಲ್ಲವೆಂದು ಹೇಳುತ್ತಾರೆ. 1974-75ರಿಂದ ಈಚೆಗೆ ಆರ್ಜಿ ಹಾಕಿಕೊಂಡರೂ ಮನೆಗಳನ್ನು ಕಟ್ಟಿಸಿಕೊಟ್ಟಿಲ್ಲ. ಸ್ಪಷ್ಟವಾಗಿ ಉತ್ತರ ಕೊಡಬೇಕು.

---

*Copies placed in the Karnataka Legislature Library vide No. 15 dated 16th May 1977

†Indicate that remarks or speeches have not been revised by the member concerned.

ಶ್ರೀ ಆರ್. ಗುಂಡೂರಾವ್.—ಎರಡು ಲಕ್ಷ ನಲವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ 120 ಮನೆಗಳನ್ನು ಕಟ್ಟಲಾಗಿದೆ. ಹರಿಜನ ಗಿರಿಜನ ಕುಟುಂಬಗಳಿಗೆ ವಾಸಕ್ಕೆ ಕೊಡಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಕಟಾರದಹಳ್ಳಿ ಇಳಿಕಾನೆ ತೋರಣಮಾವು ಗ್ರಾಮದಲ್ಲಿ ಎಷ್ಟು ಮನೆಗಳನ್ನು, ಹರನಗಂಡಿ ಗ್ರಾಮ, ಹೆಮ್ಮಾಳೆ, ವಸ್ತಾರಬಾಳೆ ಹಳ್ಳಿ, ಕೆಳಗೂರು, ಹಳ್ಳಿಗಳಲ್ಲಿ ಎಷ್ಟೆಷ್ಟು ಮನೆಗಳನ್ನು ಕಟ್ಟಿದ್ದೀರಾ ?

ಶ್ರೀ ಆರ್. ಗುಂಡೂರಾವ್.—ವಸ್ತಾರಬಾಳೆ ಹಳ್ಳಿಯಲ್ಲಿ ಒಂದು ಮನೆ ಕಟ್ಟಿದೆ. ಕೆಳಗೂರು ಗ್ರಾಮದಲ್ಲಿ 5 ಮನೆ ಕಟ್ಟಿದೆ, ಇಳಿಖಾನೆ ತೋರಣಮಾವು ಹಳ್ಳಿಯಲ್ಲಿ ಯಾವ ಮನೆಗಳನ್ನೂ ಕಟ್ಟಿಲ್ಲ, ಹರನಗಂಡಿ ಗ್ರಾಮದಲ್ಲಿಯೂ ಮನೆ ಕಟ್ಟಿಲ್ಲ

ಶ್ರೀ ಜಿ. ಪುಟ್ಟಸ್ವಾಮಿ.— ಸ್ವಾಮಿ, 150 ಮನೆಗಳನ್ನು ಒಂದು ತಾಲ್ಲೂಕಿನಲ್ಲಿ ಕಟ್ಟಿಸಿದ್ದೇವೆ ಎಂದು ಹೇಳುತ್ತೀರಿ. ಹರನಗಂಡಿ ಗ್ರಾಮ, ಕಟಾರದಹಳ್ಳಿ ಹಾಗೂ ವಸ್ತಾರಬಾಳೆ ಗ್ರಾಮಗಳಿಗೆ ಜಾಗ್ರತೆ ಮನೆ ಕಟ್ಟಿಸಿಕೊಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ತಾಲ್ಲೂಕಿನಲ್ಲಿ ಕಟ್ಟಿಸಿಕೊಟ್ಟಿದ್ದೇವೆ. ಈಗ ತಾವು ಈ ಗ್ರಾಮಗಳಿಗೆ ಅಗತ್ಯ ಎಂದು ತಿಳಿಸಿದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಪಿ. ಎ. ಭಂಗಿ.—(ಸಿ) ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಟ್ಟಿದ್ದೀರಿ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮನೆಗಳು ಬಿದ್ದು ಹೋಗಿವೆ, ಯಾವ ವರ್ಷದಲ್ಲಿ ಬಿದ್ದು ಹೋಗಿವೆ ಎನ್ನುವುದರ ಬಗ್ಗೆ ವಿವರ ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್. —ಮನೆಗಳು ಎಲ್ಲೆಲ್ಲಿ ಬಿದ್ದು ಹೋಗಿವೆ ಅಲ್ಲಿ ಸರ್ಕಾರ ಪುನಃ ಅವುಗಳನ್ನು ರಿಪೇರಿ ಮಾಡಿಕೊಡಲಿಕ್ಕೆ ತಕ್ಕ ಕ್ರಮ ತೆಗೆದುಕೊಂಡಿದೆ ಎಂದು ತಿಳಿಸಲಾಗಿದೆ. ತಾವು ಎಲ್ಲೆಲ್ಲಿ ಮನೆಗಳು ಬಿದ್ದು ಹೋಗಿದ್ದು ಸರ್ಕಾರದ ಗಮನಕ್ಕೆ ಬಾರದೆ ಇದ್ದರೆ ಅಂಥವುಗಳನ್ನು ನಮ್ಮ ಗಮನಕ್ಕೆ ತಂದರೆ ಅವುಗಳನ್ನೂ ಸರಿ ಮಾಡಿಕೊಡುತ್ತೇವೆ.

ಶ್ರೀ ಪಿ. ಎಂ. ಭಂಗಿ.— ಯಾವ ವರ್ಷದಲ್ಲಿ ಬಿದ್ದು ಹೋಗಿವೆ ಎಂದು ನನ್ನ ಪ್ರಶ್ನೆ, ಬಿಜಾಪುರ ಜಿಲ್ಲೆಯಲ್ಲಿ ಮಳೆಯೇ ಆಗುವುದಿಲ್ಲ. ಇವು ಮಳೆಯ ಕಾರಣದಿಂದ ಬಿದ್ದು ಹೋಗಿಲ್ಲ. ಕಂಟ್ರಾಕ್ಟರುಗಳು ಹಾಗೂ ಅಧಿಕಾರಿಗಳ ನೆಗ್ಲಿಜೆನ್ಸ್‌ನಿಂದ ಬಿದ್ದು ಹೋಗಿವೆ. ಇಂಥ ಅಧಿಕಾರಿಗಳ ಮೇಲೆ ಶಾಸನ ಮಾಡಿ ಅವರ ಕಡೆಯಿಂದ ರಿಕವರಿ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಬಿಜಾಪುರ ಜಿಲ್ಲೆಯಲ್ಲಿ ಮಳೆಯೇ ಬರುವುದಿಲ್ಲ ಎಂದಲ್ಲ. ಯಾವುದೋ ಒಂದು ಸಾರಿ ಮಳೆ ಬಿದ್ದಿರುತ್ತದೆ. ಕಂಟ್ರಾಕ್ಟರುಗಳು ಹಾಗೂ ಅಧಿಕಾರಿಗಳ ನೆಗ್ಲಿಜೆನ್ಸ್‌ನಿಂದ ಈ ಮನೆಗಳು ಬಿದ್ದಿಲ್ಲ. ಒಂದೇ ಸಾರಿ ಬಂದ ಮಳೆಯಿಂದ ಈ ಮನೆಗಳು ಬಿದ್ದು ಹೋಗಿರಬಹುದು. ಎಲ್ಲೆಲ್ಲಿ ಮನೆಗಳು ಬಿದ್ದು ಹೋಗಿವೆ ಅವುಗಳನ್ನು ಸರಿ ಮಾಡಿಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಎಂ. ಭಂಗಿ.—ಸಾಮಾನ್ಯವಾಗಿ ಅಲ್ಲಿ ಮಳೆಯೇ ಬರುವುದಿಲ್ಲ. 1975-76ರಲ್ಲಿ ಮಳೆಯಾಗಿದ್ದು, ಇವು ಯಾವ ವರ್ಷದಲ್ಲಿ ಬಿದ್ದು ಹೋಗಿವೆ ಎನ್ನುವುದನ್ನು ಹೇಳಬೇಕು.

ಶ್ರೀ ಆರ್. ಗುಂಡೂರಾವ್.—1975-76ರಲ್ಲಿ ಸುಮಾರು 815 ಮನೆಗಳನ್ನು ಕಂಪ್ಲೀಟ್ ಮಾಡಲಾಗಿದೆ. 1976-77ರಲ್ಲಿ 122 ಮನೆಗಳನ್ನು ಕಟ್ಟಲಾಗಿದೆ. ಹಿಂದೆ ಕಟ್ಟಿದ ಮನೆಗಳಲ್ಲಿ 173 ಮನೆಗಳು ಕೊರ್ಯಾಪ್ಸ್ ಆಗಿವೆಯೆಂದು ತಿಳಿಸಲಾಗಿದೆ. ಅವುಗಳನ್ನು ಸರಿಪಡಿಸಲಿಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಜನತಾ ಗೃಹ ನಿರ್ಮಾಣಕ್ಕೆ, ಒಂದು ಮನೆಗೆ ಎರಡೂವರೆ ಸಾವಿರ ರೂಪಾಯಿಗಳು ಬೇಕೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಎರಡು ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಡಬೇಕು. ಇನ್ನುಳಿದ 500 ರೂಪಾಯಿಗಳನ್ನು ಮನೆಯ ಮಾಲೀಕ ಕೊಡಬೇಕು. ಬಹುಭಾಗ ಸಂದರ್ಭಗಳಲ್ಲಿ ಈ 500 ರೂಪಾಯಿಗಳನ್ನು ಕೊಡತಕ್ಕ

ಶಕ್ತಿ ಅನೇಕ ಜನರಿಗೆ ಇರುವುದಿಲ್ಲ. ಆದ್ದರಿಂದ ಕಂಟ್ರಾಕ್ಟ್‌ರುಗಳು ಈ ಎರಡು ಸಾವಿರ ರೂಪಾಯಿಗಳಲ್ಲಿಯೇ ತನಗೆ ಸ್ವಲ್ಪ ಲಾಭ ಮಾಡಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಕೆಲಸಮಾಡಿ ಈಗ ಮನೆಗಳು ಬಿದ್ದುಹೋಗಿರುವುದಕ್ಕೆ ಕಾರಣವಲ್ಲವೇ ? ಪೂರ್ತಿ ಹಣವನ್ನು ಸರ್ಕಾರದವರೇ ಕೊಡುವ ಯೋಚನೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ತಮ್ಮ ಪ್ರಶ್ನೆ ಮುಖ್ಯವಾದುದು. ಸರ್ಕಾರದ ಉದ್ದೇಶವೂ ಅವರಿಗೆ ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡಬೇಕು ಮತ್ತು ಅವರಿಗೆ ಎಲ್ಲಾ ತರಹದ ಸೌಕರ್ಯಗಳನ್ನು ಕೊಡಬೇಕು ಎಂದು. ಆದರೆ ನಮ್ಮ ದೇಶದ ಜನಸಂಖ್ಯೆ ಮತ್ತು ಬಡತನ, ಮತ್ತು ಹಣಕಾಸಿನ ದೃಷ್ಟಿಯಿಂದ ಎಲ್ಲಾ ಒಂದೇ ಸಾರಿ ಮಾಡಿಕೊಡಬೇಕು ಎಂದರೆ ಕಷ್ಟವಾಗುತ್ತದೆ. ಅವರು ಕೊಡಬೇಕಾದ ಐದುನೂರು ರೂಪಾಯಿಗಳನ್ನು ಕೊಡುವುದಕ್ಕೆ ಶಕ್ತಿ ಇಲ್ಲದವರು ಕೆಲಸವನ್ನು ಮಾಡಿಯಾದರೂ ಒಂದು ಮನೆಯನ್ನು ಮಾಡಿಕೊಳ್ಳಲಿ ಎಂದು ಅವಕಾಶ ಮಾಡಿಕೊಟ್ಟಿದ್ದೇವೆ. ಏನೂ ಇಲ್ಲದೆ ಇರತಕ್ಕವರಿಗೆ ಒಂದು ಮನೆಯನ್ನಾದರೂ ಕಟ್ಟಿಸಿಕೊಡಬೇಕು ಎಂದೂ ಮಾಡಿದ್ದೇವೆ ಒಂದು ಪಕ್ಷ ತಮ್ಮ ಸಲಹೆಗಳು ಮತ್ತು ದೃಷ್ಟಿಯಲ್ಲಿ ಈ ಮನೆಗಳು ಪ್ರಯೋಜನವಿಲ್ಲವೆಂದರೆ, ಮತ್ತು ಅವರಿಗೆ ಒಳ್ಳೆಯ ಮನೆಗಳನ್ನು ಕಟ್ಟಿಕೊಡಬೇಕು ಎನ್ನುವ ಅಭಿಪ್ರಾಯ ಬಂದರೆ, ಅದನ್ನೂ ಪರಿಶೀಲಿಸೋಣ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತಾವೂ ಜನತಾ ಸ್ಕೀಂನಲ್ಲಿ ಮನೆಗಳನ್ನು ಹಂಚುವಾಗ ಕೆಲವು ತಾಲ್ಲೂಕುಗಳಲ್ಲಿ ಉದಾಹರಣೆಗಾಗಿ, ಸೂಳ್ಯ ಮತ್ತು ಉಡುಪಿ, ಸೂಳ್ಯ ಒಂದೇ ಅಸೆಂಬ್ಲಿ ಕಾನ್ಸ್‌ಟಿಟ್ಯೂಯನ್ಸಿ, ಉಡುಪಿಗೆ 3 ಅಸೆಂಬ್ಲಿ ಕಾನ್ಸ್‌ಟಿಟ್ಯೂಯನ್ಸಿ, ಸೂಳ್ಯಕ್ಕೂ 126 ಮನೆಗಳನ್ನು ಕಟ್ಟಿಸಿದ್ದೀರಿ, ಉಡುಪಿಗೂ 126 ಮನೆಗಳನ್ನು ಕಟ್ಟಿಸಿದ್ದೀರಿ ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಮನೆಗಳನ್ನು ಹಂಚುವುದಕ್ಕೆ ಅಸೆಂಬ್ಲಿ ಕ್ಷೇತ್ರದ ಆಧಾರದ ಮೇಲೆ ಮನೆಗಳನ್ನು ಹಂಚುವ ಸಲಹೆಯನ್ನು ಪರಿಶೀಲಿಸುತ್ತೀರಾ ?

ಶ್ರೀ ಆರ್. ಗುಂಡೂರಾವ್—ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆದನ್ನು ಖಂಡಿತವಾಗಿಯೂ ಪರಿಶೀಲಿಸೋಣ.

ಶ್ರೀಮತಿ ದಮಯಂತಿ ಬೋರೇಗೌಡ.—ತಾವು ಈಗ ಮೂರು ತರಹದ ಮನೆಗಳನ್ನು ಕಟ್ಟುತ್ತಿದ್ದೀರಿ. ಜನತಾ ಸ್ಕೀಂನಲ್ಲಿ ಎರಡೂವರೆ ಸಾವಿರ ರೂಪಾಯಿಗಳನ್ನು ಒದಗಿಸುವುದು ಲಂಪ್‌ಸಂ ಆಗಿ 1250 ರೂಪಾಯಿಗಳನ್ನು ಕೊಡುವುದು, ಇನ್ನೊಂದು, ಮತ್ತೊಂದು ಗುಡಿಸಲುಗಳನ್ನು ಹಾಕಿಕೊಳ್ಳುವುದಕ್ಕೆ ಸಹಾಯ ಮಾಡುವುದು. ಇವನ್ನೆಲ್ಲಾ ತೆಗೆದು ಒಂದೇ ರೀತಿಯ ಸಹಾಯ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು ಬಸವಾಪುರ ಜಿಲ್ಲೆಯಲ್ಲಿ ಮಳೆಬಂದು ಮನೆಗಳು ಕೊರ್ಯಾಪ್ಸ್ ಆಗಿವೆ ಎಂದು ಹೇಳಿದಿರಿ, ಆದರೆ ಬಹುತೇಕ ಮನೆಗಳು ಕಂಟ್ರಾಕ್ಟರು ನಪ್ಲೆತ್ತ ಮಾಡಿರತಕ್ಕ ಸಬ್‌ಸ್ಟ್ಯಾಂಡರ್ಡ್ ವುಡ್ ಮತ್ತು ಸಿಮೆಂಟ್ ಇಲ್ಲದೆ ಕಟ್ಟಿರತಕ್ಕದ್ದರಿಂದ ಇವುಗಳು ಬಿದ್ದು ಹೋಗಿವೆ. ಇದಕ್ಕೆ ಯಾವ ಅಧಿಕಾರಿ ಕಾರಣರಾಗಿದ್ದಾರೆ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಗುಂಡೂರಾವ್.— ಮಾನ್ಯ ಸದಸ್ಯರು ಇದನ್ನು ಸ್ವಲ್ಪ ತಾತ್ಪಿಕವಾಗಿ ನೋಡಬೇಕು. ಒಂದೂವರೆ ಸಾವಿರ ರೂಪಾಯಿಗಳಿಗೆ, ಎರಡೂವರೆ ಸಾವಿರ ರೂಪಾಯಿಗಳಿಗೆ ಮನೆಗಳನ್ನು ಕಟ್ಟಬೇಕಾದರೆ ಯಾವ ತರಹದ ಮನೆಗಳನ್ನು ಕಟ್ಟಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ಇಲ್ಲಿ ಯಾವ ಅಧಿಕಾರಿಯೂ ಮೋಸ ಮಾಡುವುದಕ್ಕೆ ಬರುವುದಿಲ್ಲ. ಏನೋ 50 ಸಾವಿರ ರೂಪಾಯಿಗಳ ಮನೆಯನ್ನು ಕಟ್ಟಬೇಕಾದರೆ, ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡುವುದಕ್ಕೆ ಬರುತ್ತದೆ. ಇಲ್ಲಿಯೂ ಮಾನ್ಯ ಸದಸ್ಯರುಗಳು ಹೆಚ್ಚು ಕಡಿಮೆಯಾಗಿರುವುದನ್ನು ನಮ್ಮ ಗಮನಕ್ಕೆ ತಂದರೆ ಶಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೇವೆ.